ರಿಗೂ ಕೂಡ ಅಂಟಿಸಿಪೇಟರಿ ಪೆನ್‌ಷನ್ ಇನ್ನೂ ಫೈನಲೈಸ್ ಆಗಿಲ್ಲ. ಆದುದರಿಂದ ಅವರು ದವಾಖಾನೆಗೆ ಬದ್ಕು ಸಾಯುವುದಕ್ಕೆ ಹತ್ತಿದ್ದಾರೆ. ಈ ವಿಷಯವನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಈ ಬಗ್ಗೆ ಏನು ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎ. ಆರ್. ಬದರಿನಾರಾಯಣ್.—ಇದಕ್ಕೆ ಒಂದು ಜನರಲ್ ಗೌರ್ನಮೆಂಟ್ ಆರ್ಡರ್ ಇದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಅವರಿಬ್ಬರಿಗೂ ತೊಂದರೆ ಇದೆ ಎಂದು ಬರೆದುಕೊಟ್ಟರೆ ಆದರ ಮೇರೆ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—(ಅ) ಗೆ ಉತ್ತರವಾಗಿ ಈ ಉಪಧ್ಯಾಯರು ಯಾವ ನಿಯಮಗಳ ಮೇರೆಗೆ ನಿವೃತ್ತಿ ವೇತನ ಪಡೆಯಲು ಅರ್ಹರಾಗಿದ್ದಾರೆಂಬ ವಿಷಯವು ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಾರೆ. ಆದುದರಿಂದ ಇದು ಎಷ್ಟು ದಿವಸದಿಂದ ಪರಿಶೀಲನೆಯಲ್ಲಿದೆ, ಮತ್ತು ಈಗ ಯಾವ ಹಂತದಲ್ಲಿ ಇದೆ ? ಎಷ್ಟು ದಿವಸಗಳೊಳಗೆ ಆ ನಿಯಮಗಳನ್ನು ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎ. ಆರ್. ಬದರಿನಾರಾಯಣ್.—ಶ್ರೀಮಾನ್ ಬಂಗಾರಪ್ಪನವರು ಈಗ ತಾನೇ ನನ್ನ ಗಮನಕ್ಕೆ ತಂದರು. ಮತ್ತು ನಾನು ಪ್ರವಾಸಕ್ಕೆ ಹೋದಾಗಲೂ ಕೂಡ ಉಪಾಧ್ಯಾಯರು ತಿಳಿಸಿದರು. ಆದುದರಿಂದ ಈ ಬಗ್ಗೆ ಕೂಡಲೇ ವಿಮರ್ಶೆಮಾಡಿ ಅಂಟಿಸಿಪೇಟರಿ ಪೆನ್‌ಷನ್ ಬೇಗ ಕೊಡುವ ಹಾಗೆ ಸೂಚನೆ ಕೊಡುವುದಕ್ಕೆ ಪ್ರಯತ್ನಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ಇದು ಎಷ್ಟು ದಿವಸದಿಂದ ಪೆಂಡಿಂಗ್ ಇದೆ ?

ಶ್ರೀ ಎ. ಆರ್. ಬದರಿನಾರಾಯಣ್.—ಇದು ಎಷ್ಟು ದಿವಸದಿಂದ ಪೆಂಡಿಂಗ್ ಇದೆ ಎಂದು ಹೇಳುವುದಕ್ಕಾಗುವುದಿಲ್ಲ. ನನ್ನ ಗಮನಕ್ಕೆ ಬಂದ ತಕ್ಷಣ ಈ ಬಗ್ಗೆ ಕ್ರಮ ತೆಗೆದುಕೊಂಡಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ.—(ಅ) ಗೆ ಉತ್ತರವಾಗಿ ಈ ಉಪಾಧ್ಯಾಯರುಗಳು ಯಾವ ನಿಯಮಗಳ ಮೇರೆಗೆ ನಿವೃತ್ತಿ ವೇತನ ಪಡೆಯಲು ಅರ್ಹರಾಗಿದ್ದಾರೆಂಬ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ. ಅವರು ಶಿಕ್ಷಣ ಇಲಾಖೆಯವರು ಮಾಡಿದ ನಿಯಮಗಳ ಆಧಾರದ ಮೇಲೆ ಅರ್ಹರಾಗಿದ್ದಾರೆ ಎನ್ನುವ ಪ್ರಪೋಸರ್ಸ್ ಇದ್ದಮೇಲೆ ಏನು ಈಪ್ರೊತ್ತು ತಮಗೆ ಅನುಮಾನ ಬರುವುದಕ್ಕೆ ಕಾರಣ ಏನು ?

ಶ್ರೀ ಎ. ಆರ್. ಬದರಿನಾರಾಯಣ್.—ಅವರು ಹಳೇ ಬಾಂಬೆ ಸ್ಟೇಟ್‌ನಲ್ಲಿದ್ದಂಥಾವರು. ಆದುದರಿಂದ ಅಲ್ಲಿಯ ರೂಲ್ಸ್ ಅಂಡ್ ರೆಗ್ಯೂಲೇಷನ್ಸ್ ತರಿಸಿಕೊಂಡು ಇದರ ಬಗ್ಗೆ ಫೈನಲೈಸ್ ಮಾಡಬೇಕು. ನಮ್ಮ ಸ್ಟೇಟ್‌ನಲ್ಲಿರುವ ರೂಲ್ಸ್‌ಗೂ ಹಳೇ ಬಾಂಬೆನಲ್ಲಿರುವ ರೂಲ್ಸ್‌ಗೂ ವಿಮರ್ಶೆ ಮಾಡಬೇಕಾಗಿರುವುದರಿಂದ ಈ ಬಗ್ಗೆ ಇನ್ನೂ ಫೈನಲೈಸ್ ಆಗಿಲ್ಲ.

Sri B. B. SAYANAK.—May I know when the anticipatory pension and the final pension claims have been paid and how many teachers have died without getting the pension ?

Sri A. R. BADARINARAYANA.—I do not know the exact number.

Sri B. B. SAYANAK.—Since when the orders for anticipatory pensions have been issued ?

Sri A. R. BADARINARAYANA.—I cannot give you the exact date ; but I can tell that it is about three months back.

Apology by State Government

747. **Sri S. BANGARAPPA** (Sorab).—

Will the Minister for Education be pleased to state :—

(*a*) whether it is not a fact that the State Government tendered apology to Supreme Court in the case of promotion of Sri R.S. Nanjundappa, Principal, J. C. Polytechnic, Bangalore ;

(SRI S. BANGARAPPA)

(*b*) if so, the reasons for the same ;

(*c*) whether the Supreme Court has accepted the apology ?

SRI A. R. BADARINARAYANA (Minister for Education).—

(*a*) No.

(*b*) and (*c*) Do not arise in view of reply to clause (*a*).

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ಬೆಂಗಳೂರಿನ ಜೆ. ಪಿ. ಪಾಲಿಟೆಕ್ನಿಕ್ ಪ್ರಿನ್ಸಿಪಾಲರಾದ ಶ್ರೀ ಆರ್. ಎಸ್. ನಂಜುಂಡಪ್ಪನವರ ಬಡ್ತಿಗೆ ಸಂಬಂಧಿಸಿದ ವಿಷಯದಲ್ಲಿ ಅವರು ಸುಪ್ರೀಂ ಕೋರ್ಟಿಗೆ ಹೋದಾಗ ಅವರಿಗೆ ಪ್ರಮೋಷನ್ ಕೊಡಬೇಕು ಎಂದು ತೀರ್ಮಾನವಾಗಿರುವುದು ನಿಜವಲ್ಲವೇ ?

† ಶ್ರೀ ಎ. ಆರ್. ಬದರಿನಾರಾಯಣ್.—ಅವರು ಸುಪ್ರೀಂಕೋರ್ಟಿಗೆ ಹೋಗಿರಬಹುದು. ಅವರಿಗೆ ಏನು ಬೇಕೋ ಅದನ್ನು ಕೊಟ್ಟಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ಅವರಿಗೆ ಬಡ್ತಿ ಸಿಗತಕ್ಕಂಥ ವಿಷಯದಲ್ಲಿ ಅನ್ಯಾಯವಾಗಿದೆ ಎಂದು ತೀರ್ಪು ಬಂದನಂತರ ಅದನ್ನು ಜಾರಿಗೆ ತರುವುದರಲ್ಲಿ ರಾಜ್ಯ ಸರ್ಕಾರ ವಿಳಂಬ ಮಾಡಿರುವುದು ಅದು ಕಂಟೆಂಪ್ಟ್ ಆಫ್ ಕೋರ್ಟ್ಸ್, ಅವನ್ನು ಮಾನ್ಯ ಮಾಡದೇ ಇದ್ದುದು ನಿಜವಲ್ಲವೇ ಮತ್ತು ಅದಕ್ಕಾಗಿ ರಾಜ್ಯ ಸರ್ಕಾರದವರು ಕ್ಷಮಾಪಣೆ ಕೇಳಿದ್ದು ನಿಜವಲ್ಲವೇ?

ಶ್ರೀ ಎ. ಆರ್. ಬದರಿನಾರಾಯಣ್.—ಅವರ ಪ್ರಮೋಷನ್‌ಗೂ ತಾವು ಕೇಳಿದ ವಿಷಯಕ್ಕೂ ಸಂಬಂಧ ಇಲ್ಲ. ಅವರಿಗೆ ಪ್ರಮೋಷನ್ ಕೊಡತಕ್ಕಂಥಾ ವಿಚಾರದಲ್ಲಿ ಸರ್ಕಾರ ಅದನ್ನು ಪರಿಶೀಲಿಸುತ್ತಾ ಇದೆ. ಅದಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ಯೆಂಕಟಪ್ಪ—ಈ ಬಗ್ಗೆ ಸುಪ್ರೀಂ ಕೋರ್ಟಿನಿಂದ ತೀರ್ಪು ಬಂದಿದ್ದರೂ ಕೂಡ ಸರ್ಕಾರ ಇಲ್ಲಿಯವರೆಗೂ ಜಾರಿಗೆ ತರದೇ ವಿಳಂಬ ಮಾಡುವುದಕ್ಕೆ ಕಾರಣ ಏನು ?

ಶ್ರೀ ಎ.ಆರ್. ಬದರಿನಾರಾಯಣ್.—ಸುಪ್ರೀಂ ಕೋರ್ಟ್‌ನ ತೀರ್ಮಾನದ ವಿಚಾರವೇ ಬೇರೆ, ನೀವು ಕೇಳತಕ್ಕಂಥ ವಿಚಾರವೇ ಬೇರೆ. ಅವರು ನನಗೆ ಸೀನಿಯಾರಿಟಿ ಬರಬೇಕು ಎಂದು ಕೇಳಿದ್ದಾರೆ. ಅದುದರಿಂದ ಆ ಬಗ್ಗೆ ಏನೂ ತೊಂದರೆ ಇಲ್ಲ, ಅವರಿಗೆ ಏನು ದೊರೆಯಬೇಕೋ ಅವನ್ನು ಕೊಟ್ಟಿದೆ.

ಶ್ರೀ ಎಸ್. ಬಂಗಾರಪ್ಪ.—ಇದನ್ನು ಜಾರಿಗೆ ಕೊಡುವುದರಲ್ಲಿ ಅನ್ಯಾಯವಾಗಿದೆ ಎಂದು ಕಂಟೆಂಪ್ಟ್ ಆಫ್ ಕೋರ್ಟ್ ಬಗ್ಗೆ, ರಾಜ್ಯ ಸರಕಾರ ಕ್ರಮ ತೆಗೆದುಕೊಳ್ಳುವ ಬಗ್ಗೆ ಈ ಎಲ್ಲ ವಿವರಗಳೂ ಪತ್ರಿಕೆಗಳಲ್ಲಿ ಬಂದಿದ್ದವು, ಅದರಂತೆ ರಾಜ್ಯ ಸರಕಾರ ಕ್ಷಮಾಪಣೆ ಕೇಳಿದ್ದು ನಿಜವೇ ?

ಶ್ರೀ ಎ. ಆರ್. ಬದರೀನಾರಾಯಣ.—ಈ ಸಂದರ್ಭದಲ್ಲಿ ಅಂಥಾದ್ದು ಯಾವುದೂ ಇಲ್ಲ.

Varahi Hydro-Electric Project

561. SRI. A. G. KODGI (Baindur).—

Will the Minister for Public Works and Electricity be pleased to state :—

(*a*) the quantum of energy that would be available to the State by Varahi Hydro Electric Project and the revenue to be derived to the State Exchequer therefrom ;